ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 3—5ನೆ ಅಕ್ಟೋಬರ್ 1907.

1906ನೆ ಇಸವಿ ನವಂಬರ್ 8ನೆ ನಂಬರ್ F. L. 3304-6—S. R. 146-05-7ನೆ ಗೌರ್ನಮೆಂಟ್ ಆರ್ಡರು ಅನುಸರಿಸಿ ಈ ಮೂಲಕ ತಿಳಿಯಪಡಿಸುವದೇನಂದರೆ,—

ಡಿಸ್ಟ್ರಿಕ್ಟ ಮಜಕೂರು ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿ ಹಕ್ಕು ತಹಲ್ ವರಿಗೂ ಗೌರ್ನಮೆಂಟಿನಿಂದ ಸ್ಥಿರಪಡಿಸಲ್ಪಡದೆ ಇರುವ ಶ್ರೀ ಪರಕಾಳಿಸ್ವಾಮಿಗಳವರ ಮಠ ಮತ್ತು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಗಳಿಗೆ ಸೇರಿದ ಇನಾಂ ಗ್ರಾಮಗಳ ಕೇಂದಿ ಹುಟ್ಟುವಳಿಗೆ ಮಠದ ಹಕ್ಕನ್ನು ಸ್ಥಿರಪಡಿಸುವ ವಿಚಾರದಲ್ಲಿ ಮೈಸೂರು ಡಿಸ್ಟ್ರಿಕ್ಟ ಎಕ್ಸೆಸ್ಟ್ರಾ ಆಫಿಸರವರು 1—11—1907ನೆ ತಾರೀಖಿನ ದಿವಸ ಅವರ ಆಫೀಸಿನಲ್ಲಿ ಅವಶ್ಯವಿರುವ ವಿಚಾರಣೆಯನ್ನು ನಡಿಸುತ್ತಾರೆ.

ಸದರಿ ಮತಗಳ ಏಜಂಟರುಗಳು ಮೇಲ್ಕಂಡ ಆಫೀಸರ ಬಳಿ ಸದರಿ ತಾರೀಖುನಲ್ಲಿ ತಮ್ಮಲ್ಲಿ ಇರತಕ್ಕ ಸನ್ನದು, ಇನಾಂ ಟೈಟಲ್ ಡೀಡು, ಮುಚ್ಚಳಿಕೆ ವಗೈರೆ ಸಕಲ ದಾಖಲಾತಿಗಳನ್ನು ಹಾಜರ್‌ಪಡಿಸತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ರೂಲ್ಸು ಮೇರೆ ಕ್ರಮ ಜರಿಗಿಸುತ್ತೆ. ನಂತರ ಬರುವ ಯಾವ ತಕರಾರನ್ನೂ ಅಂಗೀಕರಿಸಲಾಗಲಾರದೆಂದು ಪ್ರಸಿದ್ಧಪಡಿಸಿದೆ.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜಿ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರಿವ ಪ್ರಸಿದ್ಧಪತ್ರಿಕೆ.

ತಾರೀಖು 26–30ನೆ ಸೆಪ್ಟಂಬರ್ 1907.

1. ಕಂದಾಯದ ಬಾಕೀದಾರರಾದ ಇನಾಂ ಕಣ್ಣೂರು ಗ್ರಾಮದ ಚಿದಂಬರಭಟ್ಟ ವಗೈರೆಯರಿಂದ ಬರಬೇಕಾದ ಜಮ್ಮಿ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟ ಶಿಕಾರಿಪುರ ತಾಲ್ಲೂಕು ಕಳ್ಳೇರಿಯಲ್ಲಿ ಶಿವಮೊಗ್ಗ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂ 1907ನೆ ಇಸವಿ ನವಂಬರ್ 11ನೆ ತಾರೀಖಿನಲ್ಲಿ (ಸೋಮವಾರ) ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಿಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1906—07ನೆ ಸಾಲಿಗೆ ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀಲ್ ಮೇರಿಗೆ ರೂಪಾಯಿ 392—6—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟ್ಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಖಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಯಾ ಈ ಭಾಗದಲ್ಲಿ ಅಧಿಕಾರವನ್ನು ಹೊಂದಿದ ಇತರ ಅಧಿಕಾರಿಯಿಂದಾಗಲಿ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾ

ಜ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಿಸಿದವರ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರಿ ಅಥವಾ ಬಾಗಾಯ್ತು.	ವಿಸ್ತೀರ್ಣ.	ಎಕ್ಕರೆ.	ಅಂದಾಜು ಕಿಮ್ಮತ್ತು.	ಸರ್ಕಾರಕ್ಕೆ ಸಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ.	ಸರ್ಕಾರಕ್ಕೆ ಇನ್ನೇನಾದರೂ ಕೊಡಬೇಕಾದ ಸಹಿತವಾದ ಬಾಕಿ.
					ರೂ.			ಎ. ಗು.	ರೂ. ಆ. ಪೈ.	ರೂ.	ರೂ. ಆ. ಪೈ.	ರೂ. ಆ. ಪೈ.
ಕಿಕ್ಕಾರಿಪುರ	ಬೆಳಂದೂರು	ಕೆಂಗೂರು ಅನಾಂ	ಚಿದಂಬರಘಟ್ಟಾ ನಗ್ಗುರೇರು	...	..	...	ಖುಷ್ಕಿ ...	436 5	171 11 2	ರೂ. 1,000	ರೂ. ಆ. ಪೈ. 56 2 9	392 6 3
							ತರಿ ...	338 30	1,057 11 2			
							ಪರಂಪೋಕು.	87 11	5 8 0			
								862 6	1,234 14 4			

ಜತುರ್ಗಡಿ.

ಪೂರ್ವಕ್ಕೆ —ಸಾಗರ ತಾಲ್ಲೂಕು ಅಳ್ಳಹಳ್ಳಿ ಉದ್ದನೂರು ಗಡಿ.
ಪಶ್ಚಿಮಕ್ಕೆ —ಗಾಜ ಮತ್ತು ಮುಲಂದೂರು ಹಳ್ಳದ ಗಡಿ.
ದಕ್ಷಿಣಕ್ಕೆ —ಸಾಗರ ತಾಲ್ಲೂಕು ಗಿಳಲಗುಂಡಿ, ತಂಗಳವಾಡಿ, ಬೈರದ ಗಡಿ.
ಉತ್ತರಕ್ಕೆ —ದಣಂದೂರು, ಅಳ್ಳಹಳ್ಳಿ ಗಡಿ.
ಈ ಮಧ್ಯೆ ಇರುವ ಸರ್ಕಾರಿ ಗ್ರಾಮ ಜಾತಾ ದೇವಾದಾಯ ಬಾಕಿ ಇನಾಂಪೂರಾ.

ಮಹಮ್ಮದ್ ರಜಾ,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೭—೦೮ನೆ ಇಸವಿ ಮಿ|| ಅರ್ಜೀ ನಂಬರು 208.

ದೇವನಹಳ್ಳೀಲಿ ವಾಸವಾಗಿದ್ದ ಅಂಣ್ಣೈಯಪ್ಪನ ಮಗ ಮೃತಪಟ್ಟ ನಂಜುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವನಹಳ್ಳೀಲಿರುವ ಚನ್ನಬಸಪ್ಪ ಉರಫ್ ಪಿಳ್ಳಪ್ಪ, ಅಂಣ್ಣೈಯಪ್ಪ ಮೈನರ್, ಗಾರ್ಡಿಯರ್ ತಾಯಿ ಚಿಕ್ಕವೀರಮ್ಮ, ಮೃತಪಟ್ಟ ಸದರೀ ನಂಜುಂಡಪ್ಪನವರಿಗೆ ಖಾನಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ದೇವನಹಳ್ಳಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 21,770—1—2 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಚನ್ನಬಸಪ್ಪ ಉರಫ್ ಪಿಳ್ಳಪ್ಪ, 2ನೆ ಅಂಣ್ಣೈಯ್ಯಪ್ಪ ಮೈನರ್, ಗಾರ್ಡಿಯರ್ ಚಿಕ್ಕವೀರಮ್ಮನ ಅರ್ಜಿಯನ್ನು ಸ್ ೧೯೦೭ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 11ರಲ್ಲೂ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೭ನೆ ಇಸವಿ ಸೆಪ್ಟಂಬರು ತಿಂಗಳು 30ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಇ. ಜಯರಾಮ ಐಯ್ಯರ್,
ಅಫಿಷಿಯೇಟಿಂಗ್ ಸಬಾರ್ಡಿನೇಟ್ ಜಡ್ಜ್.